ಡಾ. ರೂಪಾರಿಗೆ ಅರ್ಥವಾಗಿತ್ತು.

ಪ್ರತೀಕ್ಷಣ ನಿಮ್ಮನ್ನು ಯಾರೋ ಕಾವಲು ಕಾದು ಕಣ್ಣಿಡುತ್ತಾರೆಂದರೆ ನಿಮ್ಮ ಭಾವನೆಗಳನ್ನು ಅದುಮಿರಿಸಿಕೊಂಡು ಎಷ್ಟು ಕಾಲವೆಂದು ನಿಯಂತ್ರಿಸಿಕೊಳ್ಳಲು ಸಾಧ್ಯ? ಸಂಯಮದ ನಟನೆ ಎಷ್ಟು ಹೊತ್ತು ಬಿಗಿದಿರಿsiಕೊಳ್ಳಲಾಗುತ್ತದೆ? ಒಡ್ಡು ಒಡೆದ ಅಣೆಕಟ್ಟಿನಂತೆ ಅದು ಒಡೆಯಲೇಬೇಕು. ಉತ್ಕರ್ಷದಲ್ಲಿ ಭೋರ್ಗರೆಯಲೇಬೇಕು. ಹರಿದು ಹೋಗಲೇಬೇಕು. ಮನೆಯಲ್ಲಿನ ಕ್ಯಾಮೆರಾ ಕಣ್ಣು, ಪ್ರಭಾವತಿಯ ಕಣ್ಗಾವಲು ನಿವಿಯಲ್ಲಿ ಕಸಿವಿಸಿ ಹುಟ್ಟಿಸಿದೆ. ತನ್ನ ಭಾವನೆಗಳನ್ನು ಎಲ್ಲೂ ಹೇಗೂ ಹೊರ ಹಾಕಲಾಗದೆ ಉಸಿರುಗಟ್ಟಿದಂತಾಗಿ ಸೋತಿದ್ದಾಳೆ. ಇಲ್ಲೂ ತಾನು ಆಕೆಯನ್ನು ಮಾತನಾಡಿಸುತ್ತಾ ಅಂತರ್ಯಕ್ಕೆ ಕೈ ಹಾಕಿ ಹಳೆಯದ್ದನ್ನು ಕಲಕಿ ಬಿಟ್ಟಾಗ ನಿವಿಯಲ್ಲಿ ಬಿರುಗಾಳಿ ಎದ್ದಿದೆ. ಆ ಒತ್ತಡ ನೀಗಲಾಗದ ಕಾರಣಕ್ಕೇ ಆಕೆ ತನ್ನನ್ನು ತಾನು ಗಾಯಗೊಳಿಸಿಕೊಂಡು ಆ ಕಿಚ್ಚನ್ನು ಹೀಗೆ ಹೊರಹಾಕಿದ್ದಾಳೆ!'

'ಹಾಗಾದರೆ ನೀನು ಪ್ರದೀಪನ ಮೇಲೆ ಮಾಡಿದ ಅಪವಾದಗಳೆಲ್ಲಾ ಸುಳ್ಳು'.

'ಹೌದು'.

'ಸರಿ. ಹಾಗಾದರೆ ಮತ್ತೆ ಮುಂದುವರೆಯೋಣ. ನೀನು ಈಗ ನಿಂತಿದ್ದ ಮೆಟ್ಟಿಲುಗಳಿಂದ ಕೆಳಗಿಳಿಯಬೇಕು. ಇನ್ನು ಕೇವಲ ಇಪ್ಪತ್ತು ಮೆಟ್ಟಿಲುಗಳು ಮಾತ್ರ ಇರುವುದಲ್ಲವೇ?'

'ಹೌದು'.

'ಆ ಇಪ್ಪತ್ತು ಮೆಟ್ಟಿಲುಗಳಿಳಿದರೆ ನೀನು ಇನ್ನೂ ಆಳಕ್ಕೆ ಆಳಕ್ಕೆ ಇಳಿಯುತ್ತೀಯಾ. ಶುರು ಮಾಡು ಇಳಿಯಲು. ಹತ್ತೊಂಬತ್ತು, ಹದಿನೆಂಟು, ಹದಿನೇಳು... ಇಳಿದೆಯಾ?' ಎಂದು ಮತ್ತೆ ಒತ್ತಿ ಕೇಳಿದರು ಡಾ. ರೂಪಾ.

'ಹ್ಞೂಂ'.

'ನಾಲ್ಕು. ಮತ್ತಷ್ಟು ಆಳ. ಮೂರು ಇನ್ನಷ್ಟು ಆಳ. ಎರಡು ಇನ್ನಷ್ಟು ಆಳ. ಒಂದು...' ಎಂದು ಡಾ. ರೂಪಾ ಸ್ವಲ್ಪ ಹೊತ್ತು ನಿವೇದಿತಾಳಿಗೆ ಸುಧಾರಿಸಿಕೊಳ್ಳಲು ಅನುವು ಮಾಡಿಕೊಟ್ಟಂತೆ ಮೌನ ವಹಿಸಿದರು. ಆ ಬಳಿಕ,

'ಈಗ ನೀನು ಮನಸ್ಸಿನ ಅತ್ಯಂತ ಆಳವಾದ ತುದಿ ತಲುಪಿದ್ದೀಯಾ. ಇದು ಕೊನೆಯ ಮೆಟ್ಟಿಲು. ಆಳಕ್ಕೆ ಬಹಳ ಆಳಕ್ಕೆ ಇಳಿದಿದ್ದೀಯಾ. ಎಲ್ಲಾ ಕಡೆ ಕತ್ತಲೆ. ಅಲ್ಲಿ ನೀನೊಬ್ಬಳೇ ಇದ್ದೀಯಾ ನೋಡು. ನಾನೀಗ ಯಾರ ಜೊತೆ ಮಾತನಾಡ್ತಿದೀನಿ? ನಾನೀಗ ನಿನ್ನ ಸುಪ್ತ ಮನಸ್ಸಿನ ಜೊತೆ ಮಾತನಾಡುತ್ತಿದ್ದೇನೆಯೇ? ಹೌದೆಂದಾದರೆ ನಿನ್ನ ಬಲಗೈ ಎತ್ತಿ ತೋರಿಸು. ನನಗೆ ಸಂಕೇತ ನೀಡು'.

ನಿವೇದಿತಾಳಿಂದ ಯಾವ ಪ್ರತಿಕ್ರಿಯೆಯೂ ಬರಲಿಲ್ಲ! ಅವಳು ಮೌನವಾಗೇ ಭಾವರಹಿತವಾಗಿ ಕುಳಿತಿದ್ದಳು.

'ಹಾಗಾದರೆ ನಾನೀಗ ಯಾರ ಜೊತೆ ಮಾತನಾಡುತ್ತಿದ್ದೇನೆ? ಯಾರು ನೀನು? ನೀನೀಗ ಬೇರೆ ವ್ಯಕ್ತಿ ಆಗಿದೀಯಾ?'

'ಹೇಯ್, ಹೋವ್, ಹೇಯ್' ನಿವಿ ವಿಚಿತ್ರ ಸದ್ದುಗಳನ್ನು ಹೊರಡಿಸುತ್ತಾ ಕೈ ಕಾಲು ಸೆಟೆದುಕೊಂಡು ಪ್ರತಿರೋಧ ವ್ಯಕ್ತಪಡಿಸಿದಳು.

'ನಾನು ಮಾತನಾಡಕ್ಕಾಗಲ್ಲ' ಆಕೆ ಈಗ ಹೊರಡಿಸಿದ ಧ್ವನಿ ಬೇರೆಯದೇ ಆಗಿತ್ತು!

ನಿವಿ ತನ್ನದಲ್ಲದ ಒರಟು ದನಿಯಲ್ಲಿ ಮಾತನಾಡುತ್ತಿದ್ದಳು.

ಅಲ್ಲಿಗೆ ಡಾ. ರೂಪಾರಿಗೆ ಆಕೆಯ ಸುಪ್ತ ಮನಸ್ಸು ಕೂಡಾ ಸತ್ಯವನ್ನು ಹೊರಹಾಕಲು ಇಷ್ಟಪಡುತ್ತಿಲ್ಲ ಅಥವಾ ತನ್ನೊಡನೆ ಮಾತನಾಡಿಸಲು ಬಯಸುತ್ತಿಲ್ಲವೆನ್ನುವುದು ದಿಟವಾಗಿತ್ತು. ಹಾಗಾಗಿ ಆಕೆ ತನ್ನನ್ನು ಬೇರೆಯೇ ವ್ಯಕ್ತಿಯಾಗಿ ಬಿಂಬಿಸಲು ಯತ್ನಿಸುತ್ತಿದ್ದಾಳೆ. ಈ ಸಂದರ್ಭದಲ್ಲಿ ಆಕೆಯ ಒಳಗಿನ ಕಥೆಗಾರ್ತಿ ಜಾಗೃತಾವಸ್ಥೆಗೆ ಬಂದಿದ್ದಾಳೆ. ತನ್ನ ಸತ್ಯ ಹೊರಹಾಕದೇ ಬೇರೊಬ್ಬ ವ್ಯಕ್ತಿ ಅಲ್ಲಿರುವಂತೆ, ಅಥವಾ ತಾನು ಬೇರೆಯೇ ವ್ಯಕ್ತಿಯಾಗಿ ತೋರಿಸಿಕೊಳ್ಳುವ ಪ್ರಯತ್ನ ಮಾಡುತ್ತಿದ್ದಾಳೆ!

'ಈಗ ನಾನು ಯಾರ ಜೊತೆ ಮಾತನಾಡುತ್ತಿದ್ದೇನೆ. ನಿನ್ನ ಹೆಸರೇನು?'

'ನಾನು... ನಾನು ಪಿಂಕಿ'.

'ನಿನಗೆ ಈಗ ಕೋಪ ಬಂದಿರುವ ಹಾಗಿದೆ. ಯಾಕೆ ನಿನ್ನ ಧ್ವನಿ ಒರಟಾಗಿದೆ. ನನ್ನ ಜೊತೆ ಮಾತನಾಡಲು ಇಷ್ಟವಿಲ್ಲವಾ?'

'ಇಲ್ಲ. ಯಾರೂ ಸರಿಯಿಲ್ಲ. ನನ್ನ ಮಾತು ಯಾರೂ ಕೇಳಲ್ಲ. ಕೆಟ್ಟ ಜನಗಳು.'

'ಏನಾಗಿದೆ ನಿನಗೆ? ನನ್ನ ಹತ್ರ ಹೇಳ್ತೀಯಾ? ಪಿಂಕಿ ಹೇಳಮ್ಮ. ಏನಾಯಿತು ನಿನಗೆ?' ಡಾ. ರೂಪಾ ಚಿಕ್ಕ ಮಗುವಿನೊಡನೆ ಮಾತನಾಡುವಂತೆ ಅನುನಯದ ಸ್ವರದಲ್ಲಿ ಮೃದುವಾಗಿ ನುಡಿದರು.

ಇದ್ದಕ್ಕಿದ್ದಂತೆ ನಿವೇದಿತಾಳ ಮುಖ ವ್ಯಗ್ರವಾಯಿತು. ಕೈ ಕಾಲುಗಳು ಸೆಟೆದುಕೊಳ್ಳುವಂತೆ ಬಿಗಿ ಹಿಡಿದಳು. ನಂತರ ಕಾಲುಗಳನ್ನು ಮಡಚಿ ಎದೆಗೆ ತಾಗಿಸಿಕೊಂಡು ಭಯಗ್ರಸ್ತಳಾಗಿ ಕುಳಿತಳು.

ಡಾ. ರೂಪಾ ಆಕೆಯ ಅನಿರೀಕ್ಷಿತ ವರ್ತನೆಗೆ ಉಸಿರು ಬಿಗಿ ಹಿಡಿದುಕೊಂಡು ಕುಳಿತಿದ್ದರು. ಹಲ್ಲುಗಳು ಕಟಕಟನೇ ಕಡಿದಳು. ಇಡೀ ಮೈಯನ್ನು ಬಿಗಿ ಹಿಡಿಯುತ್ತಾ ಪ್ರತಿರೋಧ ವ್ಯಕ್ತಪಡಿಸಿದಳು. ಪರಿಸ್ಥಿತಿ ವಿಕೋಪಕ್ಕೆ ಹೋಗುತ್ತಿದೆ ಎನಿಸಿತು. ನಿವಿಯ ಮನಸ್ಸಿಗೆ ತೀರಾ ಧಕ್ಕೆಯುಂಟು ಮಾಡಲಾಗದೆ ಅಂದಿನ ಸೆಶನ್ ಅಲ್ಲಿಗೇ ಮೊಟಕುಗೊಳಿಸಬೇಕಾಯಿತು.

'ನಿವೇದಿತಾ, ರಿಲ್ಯಾಕ್ಸ್ ಆಗು. ಇಲ್ಲಿ ಯಾರೂ ಇಲ್ಲ. ಹೀಗೆ ಆರಾಮಾಗಿ ಕುಳಿತುಕೋ. ದೀರ್ಘವಾಗಿ ಉಸಿರೆಳೆದುಕೋ. ಉಸಿರು ಬಿಡು, ಆರಾಮ, ರಿಲ್ಯಾಕ್ಸ್ ರಿಲ್ಯಾಕ್ಸ್. ಈಗ ಸುಷುಪ್ತಿಯಿಂದ ಪ್ರಜ್ಞಾಸ್ಥಿತಿಗೆ ಮರಳುತ್ತಿದ್ದೀಯಾ. ಮತ್ತೆ ಸಹಜ ಸ್ಥಿತಿಗೆ ನೀನು ಮರಳುತ್ತಿದ್ದೀಯಾ. ನಿನ್ನ ಮನಸ್ಸು ಹಗುರವಾಗಿದೆ. ನಿಧಾನವಾಗಿ ಆ ಮೆಟ್ಟಿಲುಗಳನ್ನೇರಿ ಮತ್ತೆ ಬೆಳಕಿನ ಕಡೆಗೆ ಬರುತ್ತಿದ್ದೀಯಾ'

ಡಾ. ರೂಪಾ ಹಂತಹಂತವಾಗಿ ಮತ್ತೆ ನಿವಿಯನ್ನು ಪ್ರಜ್ಞಾಸ್ಥಿತಿಗೆ ಕರೆತಂದರು.

ನಿವಿ ನಿಧಾನಕ್ಕೆ ಕಣ್ಬಿಟ್ಟು ನೋಡಿದಾಗ ಕೋಣೆಯಲ್ಲಿ ಮಂದ ಬೆಳಕಿತ್ತು.

'ನಾನು ಏನು ಹೇಳಿದೆ?' ನಿವಿ ಸಣ್ಣ ಆತಂಕದಿಂದ ಪ್ರಶ್ನಿಸಿದಳು.

'ನೀನು ಏನೂ ಹೇಳಲೇ ಇಲ್ಲ. ಡೋಂಟ್ ವರಿ' ಎಂದು ಆಕೆಯ ಕೈಹಿಡಿದೆಬ್ಬಿಸಿ ಡಾ. ರೂಪಾ ಹೊರಗೆ ಕರೆ ತಂದರು. ನಿವೇದಿತಾಳ ಮನಸ್ಸು ಮುಂಚಿಗಿಂತಲೂ ತುಸು ಹಗುರವಾದಂತೆನ್ನಿಸಿತ್ತು. ಪ್ರದೀಪ ಕಳಿಸಿದ ಗಾಡಿಯಲ್ಲಿ ಆಕೆ ಹೊರಟು ಹೋದ ಬಳಿಕ, ಚಿಕಿತ್ಸೆಯ ಪರಿಣಾಮಗಳನ್ನು ಅರಿಯಲು ಪ್ರದೀಪ ಕಾತುರನಾಗಿ ಡಾ. ರೂಪಾ ಅವರಲ್ಲಿಗೆ ಬಂದಿದ್ದ. 'ಏನಾಯಿತು ಮೇಡಮ್? ಇವತ್ತಿಗೆ ಎಲ್ಲಾ ಮುಕ್ತಾಯನಾ?'

'ಇಲ್ಲ ಪ್ರದೀಪ್. ಅರ್ಧಕ್ಕೆ ನಿಲ್ಲಿಸಬೇಕಾಯಿತು. ಆಕೆ ಉದ್ರಿಕ್ತಳಾಗಿದ್ದಳು. ಅಂಥ ಸ್ಥಿತಿಯಲ್ಲಿ ನಾವು ಸಮ್ಮೋಹನ ಮಾಡಲು ಆಗುವುದಿಲ್ಲ. ಇನ್ನೊಂದು ಸೆಷನ್ ಬೇಕಾಗುತ್ತೆ' ಎಂದಾಗ ಪ್ರದೀಪ ನಿರಾಶನಾದ.

'ಮತ್ತೊಂದಾ? ಆಕೆಯ ಮನಸ್ಸಿನ ಮೇಲೆ ಇದು ಅಡ್ಡ ಪರಿಣಾಮ ಬೀರದು ತಾನೇ ಮೇಡಮ್?' ಎಂದು ಆತಂಕದಿಂದ ಪ್ರಶ್ನಿಸಿದ.

'ಇಲ್ಲ ಪ್ರದೀಪ್. ನನಗೆ ನಿಮ್ಮ ಚಿಂತೆ, ಕಾಳಜಿ ಅರ್ಥವಾಗುತ್ತೆ. ಆಕೆ ಸಹಕರಿಸುತ್ತಿದ್ದಾಳೆ. ನಾನು ಮೂರು ಪದರುಗಳಲ್ಲಿ ಆಕೆಯನ್ನು ಅರ್ಥ ಮಾಡಿಕೊಳ್ಳಲು ಯತ್ನಿಸಿದೆ. ಹಂತಹಂತವಾಗಿ ರಿವರ್ಸ್ ಮಾದರಿಯಲ್ಲಿ ಆಕೆಯ ಮನಸ್ಸನ್ನು ಅಳೆದೆ.

ಮೊದಲು ಒಬ್ಬ ತಾಯಿಯಾಗಿ ಆಕೆಯನ್ನು ಮಾತನಾಡಿಸಿದೆ. ನಂತರ ಒಬ್ಬ ಪತ್ನಿಯಾಗಿ. ಕಡೆಗೆ ಆಕೆಯ ಬಾಲ್ಯ ಕಾಲಕ್ಕೆ ಹೋದೆ. ಅಲ್ಲಿ ಅವಳು ಡಿಸ್ಟರ್ಬ್ ಆಗಿದ್ದಾಳೆ. ಬಾಲ್ಯ ಕಾಲದ ಯಾವುದೋ ಘಟನೆ, ಅವಳನ್ನು ಆಘಾತಕ್ಕೊಳಪಡಿಸಿದೆ. ಅದು ಎಷ್ಟರಮಟ್ಟಿಗೆ ಅವಳ ಮನಸ್ಸಿನ ಮೇಲೆ ಗೀರು ಉಂಟು ಮಾಡಿದೆ ಎಂದರೆ ಅದರ ಗಾಯ ಇನ್ನೂ ಅಳಿದಿಲ್ಲ. ತೀರಾ ಸೂಕ್ಷ್ಮ ಮನಸ್ಸಿನ ಮೇಲೆ ಧಕ್ಕೆ ಉಂಟಾದರೆ, ಅದರ ಛಾಪು ಅಳಿಯುವುದಿಲ್ಲ. ಎಲ್ಲೋ ಸಪ್ರೆಸ್ಡ್ ಮೆಮೊರಿಯಾಗಿ, ಅಂದರೆ ಹತ್ತಿಕ್ಕಿಕೊಂಡ ಸ್ಮೃತಿಗಳಾಗಿ ಮನಸ್ಸಿನ ಪದರುಗಳಡಿಯಲ್ಲಿ ಹುದುಗಿಕೊಂಡು ಇರುತ್ತವೆ. ಕೆಲವು ಸಲ ಅವು ನಮ್ಮ ತಾಳಿಕೆಯ ಪರಿಧಿಯನ್ನು ಮೀರಿದಾಗ ಸ್ಫೋಟಿಸಿ ಹೊರ ಬಂದು ನಮಗೇ ಅರಿವಿಲ್ಲದಂತೆ ಅದು ನಮ್ಮ ವರ್ತನೆಗಳನ್ನು ಮಾರ್ಪಾಡುಗೊಳಿಸುತ್ತವೆ. ನಮ್ಮ ನಡವಳಿಕೆಗಳ ಮೇಲೆ ತಮ್ಮ ಪ್ರಭಾವ ಬೀರುತ್ತವೆ. ನಿವಿಯಲ್ಲೂ ಆಗಿದ್ದು ಅಷ್ಟೆ. ಬಾಲ್ಯ ಕಾಲದ ಘಟನೆಗಳು ಅವಳ ಮನಸ್ಸನ್ನು ಜರ್ಝರಿತಗೊಳಿಸಿದೆ. ಅದು ಈಗಲೂ ಆಕೆಯನ್ನು ಕರಾಳ ನೆರಳಾಗಿ ಕಾಡುತ್ತಿದೆ. ಎಲ್ಲೂ, ಯಾರ ಬಳಿಯೂ ಹೇಳಿಕೊಳ್ಳಲಾಗದ, ತನ್ನೊಳಗೇ ದಬ್ಬಿಟ್ಟುಕೊಳ್ಳಲಾಗದ ಸ್ಥಿತಿಯಲ್ಲಿ ಪರಿತಪಿಸುತ್ತಿದ್ದಾಳೆ. ನಿಮ್ಮನ್ನು ಆಕೆ ಅಪಾರವಾಗಿ ಪ್ರೀತಿಸುತ್ತಾಳೆ. ಆದರೆ ನಿಮ್ಮಲ್ಲೂ ತನ್ನ ಹಳೆಯ ನೋವನ್ನು ಹೇಳಿಕೊಳ್ಳಲಾಗದ ಬಗ್ಗೆ ಆಕೆಗೆ